# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು

ದಿನಾಂಕಃ 05ನೇ ನವೆಂಬರ್ ತಿಂಗಳು 2025ರಂದು

**ಸಿಸಿ ನಂ.12/2025**

**ಫಿರ್ಯಾದುದಾರರುಃ** ದಿನೇಶ್ ಕುಮಾರ್.ಸಿ. ಬಿನ್ ಸಿ.ಚನ್ನಸ್ವಾಮಿ,
ಸುಮಾರು ವಯಸ್ಸು 45 ವರ್ಷ, ವಾಸಃ ನಂ. 2132,
ಗಣೇಶ ದೇವಸ್ಥಾನದ ಬೀದಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**– ವಿರುದ್ಧ –**

**ಆರೋಪಿಃ** ನಾಗೇಂದ್ರರಾವ್, ಬಿನ್ ಲೇಟ್ ಜಿ.ಭೀಮಾ ರಾವ್,
ಸುಮಾರು ವಯಸ್ಸು 61 ವರ್ಷ, ವಾಸಃ ನಂ. 3316,
ಮಾರುತಿ ಬಡಾವಣೆ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

## ಭಾರತೀಯ ನಾಗರಿಕಾ ಸುರಕ್ಷಾ ಸಂಹಿತೆಯ ಕಲಂ 274 ರ ಅಡಿಯಲ್ಲಿ ಆರೋಪಣಾ ಸಾರಾಂಶ

ಆರೋಪಿಯಾದ ನೀವು ಮತ್ತು ಫಿರ್ಯಾದುದಾರರಾದ ಹಲವಾರು ವರ್ಷಗಳಿಂದ ಪರಿಚಿತರಾಗಿದ್ದು ಹಾಗೂ ನೀವು ಫಿರ್ಯಾದುದಾರರ ಸ್ನೇಹಿತರಾಗಿದ್ದು, ನೀವು ಚಿಟ್ ಫಂಡ್ ನಡೆಸುತ್ತಿದ್ದು, ಅದರಲ್ಲಿ ಫಿರ್ಯಾದುದಾರರು ಓರ್ವ ಸದಸ್ಯರಾಗಿದ್ದು, ಫಿರ್ಯಾದುದಾರರು ಬಿಡ್ ಪಡೆದುಕೊಂಡಿದ್ದರೂ ಸಹ ನೀವು ಅದರ ಹಣವನ್ನು ಅವರಿಗೆ ಪಾವತಿಸದೇ ಇದ್ದು, ಫಿರ್ಯಾದುದಾರರು ನಿಮ್ಮ ಬಳಿ ಚಿಟ್ ಬಿಡ್ ಹಣವನ್ನು ಪಾವತಿಸುವಂತೆ ಹಲವಾರು ಕೇಳಿದ್ದು, ಆದರೂ ನೀವು ಹಣ ಪಾವತಿಸದೇ ಇದ್ದಾಗ ದಿನಾಂಕಃ 06.09.2023ರಂದು ಫಿರ್ಯಾದುದಾರರು ನಿಮ್ಮ ವಿರುದ್ಧ ಹುಣಸೂರು ಪಟ್ಟಣ ಠಾಣೆಯಲ್ಲಿ ದೂರನ್ನು ನೀಡಿದ್ದು, ಅದೇ ದಿನ ನೀವು ಠಾಣೆಗೆ ಹಾಜರಾಗಿ

ಹೇಳಿಕೆಯನ್ನು ನೀಡಿದ್ದು ಹಾಗೂ ಹಣ ಮರುಪಾವತಿಯ ಸಲುವಾಗಿ 16.04.2024 ರ ದಿನಾಂಕ ನಮೂದಿಸಿ ಎಂ.ಡಿ.ಸಿ.ಸಿ. ಬ್ಯಾಂಕ್, ಹುಣಸೂರು ಶಾಖೆಯ ಚೆಕ್ ಸಂಖ್ಯೆ 025863 ಅನ್ನು ರೂ.4,32,000/-ಗಳಿಗೆ ಫಿರ್ಯಾದಿದಾರರಿಗೆ ನೀಡಿದ್ದು, ಅದನ್ನು ಅವರು ತಮ್ಮ ಖಾತೆ ಹೊಂದಿದ ಆಕ್ಸಿಸ್ ಬ್ಯಾಂಕ್, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ದಿನಾಂಕಃ 18.04.2024ರಂದು ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ನಿಮಗೆ ತಿಳಿಸಿದಾಗ ನೀವು ಜೂನ್ 2024 ರಂದು ಪುನಃ ನಗದೀಕರಣ ಮಾಡುವಂತೆ ತಿಳಿಸಿದ್ದು, ನಿಮ್ಮ ಮಾತನ್ನು ನಂಬಿ ಫಿರ್ಯಾದುದಾರರು ಚೆಕ್ ನ್ನು ಪುನಃ ತಮ್ಮ ಖಾತೆ ಹೊಂದಿದ ಬ್ಯಾಂಕ್ ಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಪುನಃ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕಾಗಿ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ದಿನಾಂಕಃ14.06.2024 ರಂದು ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ದಿನಾಂಕಃ12.07.2024 ರಂದು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯ ಮೂಲಕ ನೋಟೀಸ್ ನ್ನು ನೀಡಿದ್ದು, ಸದರಿ ನೋಟೀಸ್ ನಿಮಗೆ ದಿನಾಂಕಃ23.07.2024ರಂದು ಖುದ್ದಾಗಿ ಜಾರಿಯಾಗಿದ್ದರೂ ಸಹ ನೀವು ಉದ್ದೇಶಪೂರ್ವಕವಾಗಿ ಚೆಕ್‌ನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ನೋಟೀಸ್‌ಗೆ ಉತ್ತರವನ್ನಾಗಲೀ ನೀಡದೆ ಇರುವುದರಿಂದ ನೀವು ನೆಗೋಷಿಯೆಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ 138ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆ:1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿಯಿತು |
| ಪ್ರಶ್ನೆ: 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರ: | ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು. |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ANITHA Digitally signed by ANITHA Date: 2025.11.05 18:03:15 +0530

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿ: